# ಇದು ಗುಂಪಿನಾಟವಯ್ಯಾ...

ಗುಂಪುಗಳು ಹೆಚ್ಚಾದಷ್ಟು ತಲೆಬಿಸಿ. ಎಲ್ಲದಕ್ಕೂ ಪ್ರತಿಕ್ರಿಯೆ ನೀಡಬೇಕೆಂಬ ಸಂದಿಗ್ಧ. ಕೆಲವೊಮ್ಮೆ ಇಕ್ಕಟ್ಟಿಗೆ ಸಿಲುಕಿಸುವ ಸಂದೇಶಗಳೂ ಇರುತ್ತವೆ. ಎಲ್ಲವೂ ಗುಂಪಿನಾಟವೇ... ಅದೇ ವಾಟ್ಸಾಪ್ ಗುಂಪಿನಾಟವಯ್ಯಾ...

■ ಸುಮಾ ವೀಣಾ

ಗೊಂಬೆಯಾಟವಯ್ಯಾ...! ಅಲ್ಲ, ಇದು ಗುಂಪಿನಾಟವಯ್ಯಾ... ವಾಟ್ಸಾಪ್ ಗುಂಪಿನಾಟವಯ್ಯಾ...

ಗುಂಪು ಮೊದಲಿಗೆ 'ಸಮೂಹ' ಅನ್ನುವ ಅರ್ಥದಲ್ಲಿತ್ತು. ಗುಂಪಿಗೆ ಗಾರ/ಗಾರಿಕೆ ಸೇರಿ ಗುಂಪುಗಾರಿಕೆ ಆಯಿತು. ಹುನ್ನಾರ ನಡೆಸುವ ವ್ಯಕ್ತಿಗಳ ಗುಂಪಿಗೆ ಅಥವಾ ವಿರೋಧಿಗಳ ಒಂದು ಬಣಕ್ಕೆ ಗುಂಪು ಎಂದಾಯಿತು. ನೆಗೆಟಿವ್ ಶೇಡ್‌ನಲ್ಲಿಯೇ 'ಗುಂಪು', 'ಗುಂಪುಗಾರಿಕೆ' ಪದ ಬಳಕೆಯಾಯಿತು. ಇತ್ತೀಚೆಗೆ ನಾವು ಸಾಮಾಜಿಕರು ವಾಟ್ಸಾಪ್‌ನಲ್ಲೂ ಗುಂಪು ಸೇರುವುದು, ಗುಂಪಿನಿಂದ ನಿರ್ಗಮಿಸುವ 'ಗುಂಪುಗಾರಿಕೆ' ಮಾಡುತ್ತಿದ್ದೇವೆ.

ಗುಂಪಿಗೆ ಸೇರದ ಪದ ಗೊತ್ತೇ ಇದೆ. ಯಾವುದಾದರೂ ಮೂರು ಪದಗಳು ಒಂದೇ ಆಗಿದ್ದು, ಒಂದು ಪದ ಆಡ್ ಔಟ್ ಆಗಿರುತ್ತದೆ. ಹಾಗೆಯೇ ಗುಂಪಲ್ಲೂ ಎಲ್ಲರೂ ಒಂದೇ ರೀತಿ ಇರುವರು ಎನ್ನುವ ಹಾಗಿಲ್ಲ. 'ಆಟಕ್ಕುಂಟು ಲೆಕ್ಕಕ್ಕಿಲ್ಲ' ಅನ್ನುವ ಹಾಗೆಯೂ ಇರಬಹುದು. ಯಾವುದೋ ಉದ್ದೇಶಕ್ಕೆ ಪ್ರಾರಂಭವಾದ ಗುಂಪು, ಮೂಲ ಧ್ಯೇಯವನ್ನೇ ಮರೆತು ಅನ್ಯ ಸಂದೇಶಗಳೇ ತುಂಬುತ್ತಾ ಹೋಗುವುದೂ ಉಂಟು.

ಕೆಲವು ಗುಂಪುಗಳು ವೈಯಕ್ತಿಕ. ಇನ್ನೂ ಕೆಲವು ಸಾಮೂಹಿಕವಾಗಿ ರಚನೆಯಾದ ಗುಂಪುಗಳಲ್ಲಿ ಸರ್ವಾಧಿಕಾರಿ ಧೋರಣೆ ಇರುತ್ತದೆ. ಕೆಲವೊಮ್ಮೆ ನಾವು ಹೇಳಿದ್ದನ್ನು ಮಾತ್ರ ಕೇಳಬೇಕೆನ್ನುವ ದುಂಡಾವರ್ತನೆಯೂ ಇರುತ್ತದೆ. ಅಡ್ಮಿನ್‌ಗೆ ಇಷ್ಟವಾಗದ ಮಾಹಿತಿ ಬಂದರೆ, ಸಂದೇಶ ಕಳಿಸಿದವರನ್ನು ಗುಂಪಿನಿಂದ ತೆಗೆದು ಹಾಕುತ್ತಾರೆ. ತಮ್ಮ ಹೇಳಿಕೆಗಳೇ ಸರಿ ಎಂಬ ಮೊಂಡುವಾದಗಳೂ ಕಡಿಮೆಯೇನಲ್ಲ. ಹೀಗಾಯ್ತಲ್ಲ ಎಂದು ಗುಂಪಿನಿಂದ ಹೊರಹೋದವರು ಇನ್ನೊಂದು ಗುಂಪಿಗೆ ಸೇರಿಸಿ ಅವರನ್ನು ರಿಮೂವ್ ಮಾಡಿ ಮುಯ್ಯಿ ತೀರಿಸಿಕೊಳ್ಳುತ್ತಾರೆ!

ಇನ್ನು ಕೆಲವು ಗುಂಪಿನಲ್ಲಿ 'ಮುಂತಳ್ಳು' ಸಂದೇಶಗಳೇ ತುಂಬಿರುತ್ತವೆ. ಕೆಲವರು ಖಾಸಗಿ ಗುಂಪಿನಲ್ಲಿ ತಮ್ಮ ವೃತ್ತಿ ಕುರಿತು, ವೃತ್ತಿಪರ ಗುಂಪುಗಳಲ್ಲಿ ಖಾಸಗಿ ಫೋಟೊಗಳನ್ನು ಹಾಕಿ, ಕಡೆಗೆ 'ಬೈ ಮಿಸ್ಟೇಕ್' ಅನ್ನುವುದು ಸಾಮಾನ್ಯ. ಇದರ ನಡುವೆ ತಮ್ಮ ಬ್ಯುಸಿನೆಸ್ ಪ್ರಮೋಟ್ ಮಾಡುವ ಸಂದೇಶಗಳು ನೂರಾರು.

ನಾವೇ ಮೊದಲು ಸಂದೇಶ ಕಳುಹಿಸಬೇಕೆನ್ನುವ ಭರಾಟೆಯಲ್ಲಿ 'ಆಗಲಿ' ಎನ್ನುವ ಬದಲು 'ಅಗಲಿ' ಎಂದೂ, ತಮ್ಮನ ಮನೆಗೆ ಬರುತ್ತೇನೆ ಎಂದು ಟೈಪ್ ಮಾಡಹೋಗಿ ತಮ್ಮ ಮನೆಗೆ ಬರುತ್ತೇನೆ ಎಂದೂ ಹೇಳಿದಾಗ ಗಾಬರಿಯಾಗದೇ ಇದ್ದೀತೇ? 'ಮುತ್ತು ಒಡೆದರೆ ಹೋಯಿತು, ಮಾತು ಆಡಿದರೆ ಹೋಯಿತು' ಎಂಬುದನ್ನು ಈಗ 'ಮೊಬೈಲ್ ಒಡೆದರೆ ಹೋಯಿತು, ಸಂದೇಶ ಕಳುಹಿಸಿದರೆ ಹೋಯಿತು' ಎಂದು ತಿದ್ದಬಹುದೇನೋ?



ಕೆಲವೊಮ್ಮೆ ಯಾವಾಗಲೋ ಕೇಳಿದ ರಕ್ತದ ಅವಶ್ಯಕತೆಯುಳ್ಳ ಸಂದೇಶ ತಿರುಗಿ ವರ್ಷಗಳ ಬಳಿಕ ಬರುವುದೂ ಉಂಟು!

ಇನ್ನು ಕೆಲ ಬಾರಿ ಆಫರ್‌ಗಳ ಸಂದೇಶಗಳು ಬರುತ್ತವೆ. ಇಷ್ಟು ಜನರಿಗೆ ಸಂದೇಶ ಕಳುಹಿಸಿದರೆ ಇಂಥ ವಸ್ತು ಕೊಡುತ್ತೇವೆಂದು ಆಸೆ ಹುಟ್ಟಿಸುವುದು. ಅದನ್ನು ನಂಬಿ ಎಲ್ಲರಿಗೂ ಫಾರ್ವರ್ಡ್ ಮಾಡುವವರೇನೂ ಕಮ್ಮಿಯಿಲ್ಲ.

ಕೆಲವರು ಗುಂಪುಗಳಲ್ಲೂ ಸ್ವಯಂ ಹೊಗಳುಭಟರು. ಪರಸ್ಪರ ಅಭಿನಂದನೆ, ಧನ್ಯವಾದಗಳು ಒಂದು ಹಂತಕ್ಕೆ ಇದ್ದರೆ ಚಂದ. ಅತಿಯಾದರೆ ಅಸಹ್ಯ! ಕ್ಷಮಿಸಿ 'ಅಸಹ್ಯ' ಎಂದರೆ ಅ–ಸಹ್ಯ – ಸಹಿಸಲು ಸಾಧ್ಯವಾಗದ್ದು ಎಂದರ್ಥ. ಶುಭೋದಯ, ಶುಭಮಧ್ಯಾಹ್ನ, ಶುಭರಾತ್ರಿಗಳ ಮೆಸೇಜ್‌ಗಳಂತೂ ಕಿರಿಕಿರಿ ತರುವಂಥದ್ದು.

ಗುಂಪುಗಳು ಹೆಚ್ಚಾದಷ್ಟು ತಲೆಬಿಸಿ. ಎಲ್ಲಕ್ಕೂ ಪ್ರತಿಕ್ರಿಯೆ ನೀಡಬೇಕೆಂಬ ಸಂದಿಗ್ಧ. ಕೆಲವೊಮ್ಮೆ ಇಕ್ಕಟ್ಟಿಗೆ ಸಿಲುಕಿಸುವ ಸಂದೇಶಗಳೂ ಇರುತ್ತವೆ. ಇಲ್ಲಿ ಇಮೋಜಿಗಳದ್ದೇ ಸದ್ದು. ಅದೇ ಇಮೋಜಿಗಳ ಗೊಂಬೆಯಾಟವಯ್ಯಾ... ಇಮೋಜಿ ಕಳುಹಿಸುವಾಗ ತಪ್ಪಾಗಿ, ಶ್ರದ್ಧಾಂಜಲಿಗೆ ನಗುವ ಇಲ್ಲವೆ ಚಪ್ಪಾಳೆಯ ಇಮೋಜಿಯನ್ನೋ, ಅಭಿನಂದಿಸುವಾಗ ಅಳುವ ಇಮೋಜಿಯನ್ನೋ ಟೈಪಿಸಿಬಿಟ್ಟರೆ ಹೇಗೆ? ಆ ಡ್ಯಾಮೇಜ್ ಕಂಟ್ರೋಲ್ ಕಷ್ಟ, ಏನಂತೀರಿ?

ಊರಹಬ್ಬ, ಸ್ನೇಹಿತರು, ಕಾಲೇಜು, ಆಫೀಸ್, ವಾಕಿಂಗ್, ಈಟಿಂಗ್, ಗಾಸಿಪಿಂಗ್, ಟೀಸಿಂಗ್, ಡಾನ್ಸಿಂಗ್, ಸಿಂಗಿಂಗ್, ಟಾಕಿಂಗ್ ಪ್ರತಿಯೊಂದಕ್ಕೂ ಒಂದೊಂದು ಗುಂಪು. ಪರಸ್ಪರರಿಗಾಗಿ ಪರಸ್ಪರರಿಗೋಸ್ಕರ ಇರುವ ಈ ಗುಂಪುಗಳಿಂದ ಮನಸ್ಸು ಹೊಸ ಕ್ರಿಯಾಶೀಲತೆ ಕಡೆಗೆ ಚಲಿಸುವಂತಾಗಬೇಕು. ಕುಟುಂಬಗಳ ಸಾಮರಸ್ಯಕ್ಕೆ ಸಹಾಯವಾಗಿರಬೇಕು. ಸಮಾನ ಮನಸ್ಕರ ನಡುವೆ ಸಂವಹನ ಸಾವಧಾನವಾಗಿ ಆದಾಗ ಒಳ್ಳೆಯದೇ ಆಗುತ್ತದೆ. ಆರೋಗ್ಯಕರ ಚರ್ಚೆಗಳು ಪ್ರಾರಂಭವಾಗುತ್ತವೆ.

ಈ ಗುಂಪುಗಳು ಕೆಲವೊಮ್ಮೆ ಆಹ್ಲಾದವನ್ನು, ಕೆಲವೊಮ್ಮೆ ತಿಳಿವಳಿಕೆ, ಸ್ನೇಹವನ್ನು, ಮೆಚ್ಚುಗೆಯನ್ನು, ಕೆಲವೊಮ್ಮೆ ವ್ಯಸನವನ್ನು, ವಿಷಾದವನ್ನು ತರಿಸುತ್ತವೆ. ಎಲ್ಲಾ ಗುಂಪಿನಾಟವೇ... ಅದೇ ವಾಟ್ಸಾಪ್ ಗುಂಪಿನಾಟವಯ್ಯಾ... ಅಡ್ಮಿನ್ ಸೂತ್ರಧಾರ, ನಾವ್ ಪಾತ್ರಧಾರಿ...

ಪ್ರತಿಕ್ರಿಯಿಸಿ: feedback@sudha.co.in